ಹಾಕಿಕೊಳ್ಳುತ್ತಿದ್ದೀರಿ. ಎಲ್ಲೋ ಕಮ್ಯುನಿಕೇಷನ್ ಅಭಾವ ಎಂದು ಕಾಣುತ್ತದೆ.

ಶ್ರೀ ಎಸ್.ಎಸ್.ಪಾಟೀಲ್:- 121 ಓದಿದರೆ ತಮಗೆ ಅರ್ಥವಾಗುತ್ತದೆ. ಅದು ಸುಪ್ರೀಂ ಕೋರ್ಟ್‌ನಲ್ಲೂ ಕೂಡ ಅಪ್‌ಹೆಲ್ಡ್ ಆಗಿದೆ. ಅದರ ಪ್ರಕಾರ ನಾವು ಮಾಡುತ್ತೇವೆ.

ವಿಷಯ:- ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ವೃದ್ಧರಿಗೆ ಬಸ್‌ದರದಲ್ಲಿ ರಿಯಾಯಿತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 79 (598)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ವೃದ್ಧರಿಗೆ (60 ವರ್ಷ ಮೀರಿದವರಿಗೆ) ಬಸ್ ದರದಲ್ಲಿ ರಿಯಾಯಿತಿಯನ್ನು ನೀಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಈ ಸೌಲಭ್ಯ ನೀಡಲಾಗಿತ್ತು; ಈ ಸೌಲಭ್ಯವನ್ನು ರದ್ದುಪಡಿಸಲು ಕಾರಣವೇನು?

ಇ) ವಿದೇಶಗಳಲ್ಲಿ ಹಿರಿಯ ನಾಗರೀಕರಿಗೆ ಈ ರೀತಿಯ ಸೌಲಭ್ಯಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ವೃದ್ಧರಿಗೆ (ಹಿರಿಯ ನಾಗರೀಕರು) ರಿಯಾಯಿತಿ ದರದಲ್ಲಿ ಪ್ರಯಾಣ ಮಾಡಲು ಪಾಸ್ ನೀಡುವ ಸೌಲಭ್ಯವನ್ನು ಪುನಃ ಸರ್ಕಾರವು ಜಾರಿಗೆ ತರಲು ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಈ ಸೌಲಭ್ಯವನ್ನು ದಿನಾಂಕ: 12-11-83ರಿಂದ ನೀಡಲಾಗಿತ್ತು. ಸುಮಾರು 56 ಸಾವಿರ ಹಿರಿಯ ನಾಗರೀಕರು ಈ ರಿಯಾಯಿತಿ ಪ್ರಯಾಣದ ಸೌಲಭ್ಯವನ್ನು ಪಡೆಯುತ್ತಿದ್ದರು. ಸಂಸ್ಥೆಯಲ್ಲಿ ನಷ್ಟ ಸಂಭವಿಸಿದ ಕಾರಣ ಹಿರಿಯ ನಾಗರೀಕರಿಗೆ ಈ ರಿಯಾಯಿತಿ ಸೌಲಭ್ಯ ಮುಂದುವರೆಸುವುದನ್ನು ನಿಲ್ಲಿಸಲಾಯಿತು.

ಇ) ಇಲ್ಲ.

ಈ) ಇಲ್ಲ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಸುಮಾರು 1983ರಿಂದೆರೂ ಸಹ 56 ಸಾವಿರ ಜನ ಬೆಂಗಳೂರು ನಾಗರೀಕರು, ಅದರಲ್ಲೂ 60 ವರ್ಷಕ್ಕಿಂತ ಮೇಲ್ಪಟ್ಟವರಿಗೆ

ಬಸ್ ಪಾಸ್ ವ್ಯವಸ್ಥೆ ಇತ್ತು. ಅದನ್ನು ಈಗ ತೆಗೆದುಹಾಕಿದ್ದಾರೆ. ಅದನ್ನು ಪುನರ್ ಪರೀಶೀಲನೆ ಮಾಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಸೀನಿಯರ್ ಸಿಟಿಜನ್ಸ್‌ಗೆ, ಬೆಂಗಳೂರು ಸಿಟಿಯಲ್ಲಿ 1983ರಲ್ಲಿ, ನಮ್ಮ ಸರ್ಕಾರವೇ ಇದ್ದಂಥ ಸಂದರ್ಭದಲ್ಲಿ ಈ ಸೌಲಭ್ಯವನ್ನು ಕೊಟ್ಟಿದ್ದೆವು. ಆದರೆ ಬಿಟಿಎಸ್ ನಲ್ಲಿ ಸುಮಾರು 56 ಸಾವಿರ ಇದರ ಲಾಭವನ್ನು ಪಡೆಯುತ್ತಾ ಇದ್ದರು. ಟ್ರಾಫಿಕ್ ಕಡಿಮೆ ಇರತಕ್ಕ ಸಂದರ್ಭದಲ್ಲಿ ಇವರು ಪ್ರಯಾಣ ಮಾಡಬಹದು ಎಂಬ ದೃಷ್ಟಿ ಇಟ್ಟುಕೊಂಡು ಈ ಪಾಸ್‌ಗಳನ್ನು ನಾವು ಇಂಟ್ರಡ್ಯೂಸ್ ಮಾಡಿದೆವು. ಇದರಿಂದ ಸಾರಿಗೆ ಸಂಸ್ಥೆಯ ಮೇಲೆ ಸುಮಾರು ಒಂದೂವರೆ ಕೋಟಿ ರೂಪಾಯಿಗಳು ಬೆಚ್ಚವಾಗುತ್ತಿತ್ತು. ಎಲ್ಲಾ ಸಂದರ್ಭದಲ್ಲೂ ಇವತ್ತು ಪೀಕ್ ಹವರ್ಸ್‌ನಲ್ಲೂ ಸಹಿತ ಈ ಪಾಸ್‌ಗಳನ್ನು ನಾವು ನಿರ್ಬಂಧ ಮಾಡುವುದು ಕಷ್ಟವಾದುದರಿಂದ, ಈ ಸೌಲಭ್ಯವನ್ನು ನಿಲ್ಲಿಸಿದ್ದೇವೆ. ಸಧ್ಯದಲ್ಲೇ ಇದನ್ನು ಪ್ರಾರಂಭ ಮಾಡತಕ್ಕ ಆಲೋಚನೆ ಸರ್ಕಾರದ ಮುಂದೆ ಇಲ್ಲ.

ವಿಷಯ:- ಬೆಂಗಳೂರು ನಗರ ಸಾರಿಗೆಯ ಸಾಮಾನ್ಯ ಅನುಸೂಚಿಗಳು ಕಡಿಮೆಯಾಗುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 80 (231)

ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರದಲ್ಲಿ ಬೆಂಗಳೂರು ನಗರ ಸಾರಿಗೆಯ ಸಾಮಾನ್ಯ ಅನುಸೂಚಿಗಳು ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದು ಪುಷ್ಪಕ್ ಬಸ್ಸುಗಳನ್ನು ಪ್ರಾರಂಭಿಸಿರುವುದರಿಂದಲೇ?

ಇ) ಸಾಮಾನ್ಯ ಬಸ್ಸುಗಳನ್ನು ಹೆಚ್ಚಿಸುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಹೌದು.

ಇ) 1996-97ನೇ ಇಸವಿಯಲ್ಲಿ 120 ಬಸ್ಸುಗಳನ್ನು ಸೇರಿಸುವುದಲ್ಲದೆ 400 ಖಾಸಗಿ ಬಸ್ಸುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವ ಪ್ರಸ್ತಾವನೆ ಇದೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ಸನ್ಮಾನ್ಯ ಸಭಾಧ್ಯಕ್ಷರೇ, ಬೆಂಗಳೂರಿನಲ್ಲಿ ಈಗಾಗಲೇ ಜನ ಬಹಳ ಪರಿತಪಿಸುತ್ತಿದ್ದಾರೆ. ಬಿ.ಟಿ.ಎಸ್. ಬಸ್ಸುಗಳನ್ನು ಕಡಿಮೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಕಡಿಮೆ ಮಾಡಿಸುವುದು ನಿಜವೇ ಎಂದು ಕೇಳಿರುವುದಕ್ಕೆ, ಕಡಿಮೆ